KACM710017352021

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1300/2021

**ಪಿರ್ಯಾದಿ** : ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

**- ವಿರುದ್ಧ -**

**ಆರೋಪಿ/ತರು**:

1) ರಂಗಸ್ವಾಮಿ ಬಿನ್ ಈಶ್ವರಪ್ಪ, 32 ವರ್ಷ, ಕೂಲಿಕೆಲಸ,

2) ಲಕ್ಷ್ಮಮ್ಮ ಕೋಂ ಈಶ್ವರಪ್ಪ, 48 ವರ್ಷ, ಮನೆಕೆಲಸ,

ಇಬ್ಬರೂ ವಾಸ : ಲಕ್ಕವಳ್ಳಿ ಗ್ರಾಮ, ತರೀಕೆರೆ ತಾಲ್ಲೂಕು

****

**-:ದೋಷಾರೋಪಣೆ:-**

ಶ್ರೀ ಶಿವಕುಮಾರ್.ಆರ್., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ವಿರುದ್ದ ಮಾಡುವ ದೋಷಾರೋಪಣೆ ಏನೆಂದರೆ:-

ದಿನಾಂಕ 03.08.2020 ರಂದು ಸಂಜೆ 06.00 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನಲ್ಲಿ, ಚಾಸಾ-1 ಶ್ರೀಮತಿ ಜ್ಯೋತಿ ರವರು ತನ್ನ ತವರು ಮನೆಯ ಹಬ್ಬಕ್ಕೆಂದು ದಿನಾಂಕ 18.07.2020 ರಂದು ಹೋಗಿ ವಾಪಸ್ಸು ಬಂದು ತನ್ನ ಮಗು ಹಾಗೂ ಚಾಸಾ-6 ಶ್ರೀಮತಿ ಸಾವಿತ್ರಮ್ಮ ಮತ್ತು ಚಾಸಾ-7 ಕು: ಸೌಂದರ್ಯ ರವರೊಂದಿಗೆ ಕಾಯುತ್ತಿರುವಾಗ 1 ನೇ ಆರೋಪಿಯಾದ ನೀವು ಅಲ್ಲಿಗೆ ಬಂದು ನಿಮ್ಮ ಮನೆಗೆ ಹಾಕಿರುವ ಬೀಗವನ್ನು ತೆಗೆದಾಗ ಚಾಸಾ-1, 6, 7 ರವರು ಆರೋಪಿತರಾದ ನಿಮ್ಮ ಮನೆಯೊಳಗೆ ಹೋದಾಗ ಆರೋಪಿತರಾದ ನೀವು ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ನಿಮ್ಮೂರಿನ ಹಬ್ಬ ಮುಗಿದು ಎಷ್ಟೋ ದಿವಸಗಳ ನಂತರ ನಮ್ಮನೆಗೆ ಬಂದಿದ್ದೀಯಾ ಸೂಳೆಮುಂಡೆ ಎಂದು, ನಿಮ್ಮಪ್ಪನ ಮನೆಗೆ ಹೋಗೆ ಬೇರ್ವಸಿ ಮುಂಡೆ ಎಂದು ಮನೆಯ ಹೊರಗೆ ಕರೆದುಕೊಂಡು ಬಂದು ಅವಾಚ್ಯ

ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ನಂತರ ಚಾಸಾ-6 ಮತ್ತು 7 ರವರು ಜಗಳವನ್ನು ಬಿಡಿಸಲು ಹೋದಾಗ ಅವರಿಗೂ ಸಹ 1 ನೇ ಆರೋಪಿಯಾದ ನೀವು ಸೂಳೆಮುಂಡೇರಾ ನಿಮಗೆ ಮೊದಲು ಮೆಟ್ನಾಗಾ ಹೊಡೆದು ಕಳುಹಿಸಬೇಕು ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, 2 ನೇ ಆರೋಪಿಯಾದ ನೀವು ಚಾಸಾ-1, 6 ಮತ್ತು 7 ರವರಿಗೆ ಮಾನಗೆಟ್ಟ ಮುಂಡೇರಾ ನಿಮಗೆ ಮಾನಮಾರ್ಯಾದೆ ಇಲ್ಲವೇ ಬೇರ್ವಸಿಗಳ ಹೋಗಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಚಾಸಾ-1 ರವರ ತಲೆಯ ಕೂದನ್ನು ಹಿಡಿದು ಕೈಕಾಲುಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-1 ರವರ ಬಲಗೈನ ತೋರು ಬೆರಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆಯನ್ನು ನೀಡಿದ್ದು , ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಇನ್ನೊಮ್ಮೆ ನಮ್ಮನೆಗೆ ಬಂದರೆ ನಿಮ್ಮೆಲ್ಲರನ್ನು ಹೊಡೆದು ಸಾಯಿಸುತ್ತೇನೆಂದು ಚಾಸಾ-1, 6, 7 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 21.06.2022 **ಸಹಿ**

**(ಶಿವಕುಮಾರ್.ಆರ್.)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.**